Commiteee on Estimates

1. Abdul Khuddus Anwar
2. A. Veerabhadrappa Patil
3. Bapu Rao Ananda Rao
4. P. P. Hegre
5. K. B. Desai
6. G. C. Patil
7. S. A. Patil
8. S. M, Lingappa
9. G. K. Siddiah
10. K. N. Veerappa Gowda
11. *Sumathi B. Madiman*
12. B. S. Veerabhadrappa
13. K. Made Gowda
14. B. S. Patil
15. H. T. Krishnappa

Committee on Assurance

1. M. Siddamadiah
2. *Nagamma C. Keshavamurthy*
3. D. Narayandas
4. K. M. Rudrappa
5. K. Subramanya Gowda
6. Raja Pid Naik
7. N. Basaviah
8. M. K. Kulkarni

Subordinate Legislation Committee

1. T. M. Manjunath
2. M. Venkatalingiah
3. R. Peeranna
4. J. S. Ammannavar
5. K. M. Gangal
6. M. B. Ramaswamy
7. S. M. Sheernali Chandrashekar
8. P. C. Shettar

Alleged murder by Police at Chintamani Police Station

ಶ್ರೀ ಸಿ. ಬೈರೇಗೌಡ (ವೇಮಗಲ್).—ನಾನು ರೂಲ್ 312 ಪ್ರಕಾರ ಒಂದು ಸೂಚನೆ ಇವತ್ತು ಕಾಯಿಸಿದ್ದೆ.

ಅಧ್ಯಕ್ಷರು.—ಎಷ್ಟು ಹೊತ್ತಿನಲ್ಲಿ ?

ಶ್ರೀ ಸಿ. ಬೈರೇಗೌಡ.—ಸುಮಾರು ಒಂದೂವರೆ ಗಂಟೆಯಲ್ಲಿ.

ಅಧ್ಯಕ್ಷರು.—ಅದನ್ನು ನೋಡುವುದಕ್ಕೆ ನನಗೆ ವೇಳೆ ಇಲ್ಲದೇ ಇರುವಾಗ ಮಾನ್ಯ ಸದಸ್ಯರು ಈಗ ತಾನೆ ಕಳುಹಿಸಿಬಿಟ್ಟು ಅದರ ಬಗ್ಗೆ ಹೇಳುವುದಾದರೆ ಹೇಗೆ? ಈಗತಾನೆ ದೇವೇಗೌಡರೂ ಒಂದೂ ಸೂಚನೆ ಕಳುಹಿಸಿದ್ದಾರೆ.

ಶ್ರೀ ಸಿ. ಬೈರೇಗೌಡ.—ಈ ವಿಚಾರವನ್ನು ಕಾಲಿಂಗ್ ಅಟೆನ್‌ಷನ್ ಮೂಲಕ ಹಿಂದೆ ಇಲ್ಲಿ ಪ್ರಸ್ತಾಪ ಮಾಡಿದಾಗ ಅಫೆಷಿಯಲ್ಸ್ ಮೂಲಕ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಸರ್ಕಾರ ಆಶ್ವಾಸನೆ ಕೊಟ್ಟಿತ್ತು. ಆದರೆ ಇವತ್ತಿನ ಹೇಳಿಕೆಗೂ ಹಿಂದೆ ನಮಗೆ ಕೊಟ್ಟಿರತಕ್ಕ ಇನ್‌ಫಾರ್ ಮೇಷನ್ನಿಗೂ ಬಹಳ ವ್ಯತ್ಯಾಸ ಇದೆ. ಕಲ್ಲಿ ನಬ್ ಇನ್ಸ್‌ಪೆಕ್ಟರ್ ಆಗಿರತಕ್ಕವನು ಮೃತ ಶರೀರ ಪೋಲೀಸ್ ಸ್ಟೇಷನ್ನಿನಲ್ಲಿ ಇರಲಿಲ್ಲ ಎಂದು ಹೇಳಿದನೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ನಮಗೂ ಕೂಡ ಹೆಚ್ಚಿನ ವಿವರಗಳು ಗೊತ್ತಿದೆ. ಸರ್ಕಾರ ಕೊಟ್ಟಿರತಕ್ಕ ಹೇಳಿಕೆಗಳಿಗೆ ಅಲ್ಲಿ ನಡೆದು ಇರುವು ದಕ್ಕೂ ವ್ಯತ್ಯಾಸ ಇದೆ. ಆದುದರಿಂದ ಇದನ್ನು ನ್ಯಾಯಾಂಗ ತನಿಖೆ ಮಾಡಿಸಲು ಸರ್ಕಾರ ಒಪ್ಪಿ ಕೊಳ್ಳಲೇಬೇಕು. ಅದಕ್ಕಿಂತ ಕಡಿಮೆ ಆದಂಥ ತನಿಖೆ ಆದರೆ, ಅಲ್ಲಿ ನಡೆದಂತ ಸತ್ಯಾಂಶ ಹೊರಬರು ವುದಿಲ್ಲ. ಆ ಒಂದು ದೃಷ್ಟಿಯಿಂದ ನಾನು ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, ಕಳೆದ ಸಾರಿ ಈ ಸಭೆಯಲ್ಲಿ ಚಿಂತಾಮಣಿ ಪೋಲೀಸ್ ಸ್ಟೇಷನ್ನಿನಲ್ಲಿ ಪೋಲೀಸ್ ಅಧಿಕಾರಿಗಳ ದೌರ್ಜನ್ಯ ದಿಂದ ಒಬ್ಬ ನಿರಪರಾಧಿ ಮೃತಹೊಂದಿದ್ದಾನೆ ಎನ್ನುವ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಗಿ ಸರ್ಕಾರ ಆದಕ್ಕೆ ಉತ್ತರ ಕೊಟ್ಟಿದೆ. ಸೆಪ್ಟೆಂಬರ್ ಒಂದನೇ ತಾರೀಖಿನ ದಿನ ಪತ್ರಿಕೆಯಲ್ಲಿ ಬಂದಿರುವ ನುದ್ದಿಯ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛೆಪಡುತ್ತೇನೆ.

> "ಚಿಂತಾಮಣಿಯ ಪೋಲೀಸ್ ಠಾಣೆಯಲ್ಲಿ ಇತ್ತೀಚೆಗೆ ನಾಗಚಾರಿ ಎಂಬ ವ್ಯಕ್ತಿಯು ಸತ್ತ ಬಗ್ಗೆ ಆಡಿಷನಲ್ ಜಿಲ್ಲಾ ನ್ಯಾಯಾಧೀಶರ ಮುಂದೆ ನಿನ್ನೆ ಸಂಬಂಧಿ ಸಿದ ಸಬ್ ಇನ್ಸ್‌ಪೆಕ್ಟರ್ ಮತ್ತು ಸ್ಥಳೀಯ ಡಾಕ್ಟರು ನೀಡಿದ ಹೇಳಿಕೆಗಳು ಆಗಸ್ಟ್ 14ರ ರಾತ್ರಿ ಬೀಟ್ ಪೋಲೀಸರು ಆತನನ್ನು ಠಾಣೆಗೆ ಕರೆತಂದ ರೆಂದೂ, ಮರುದಿನ ಬೆಳಿಗ್ಗೆ ಆತ ಮೃತನಾದನೆಂದೂ ಹೇಳಲಾಗಿತ್ತು. ಈ ಬಗ್ಗೆ ತನಿಖೆ ನಡೆಸುತ್ತಿರುವ ನ್ಯಾಯಾಧೀಶರ ಮುಂದೆ ಸಬ್ ಇನ್ಸ್‌ಪೆಕ್ಟರ್‌ರವರು ಸಾಕ್ಷ್ಯ ನೀಡಿ ತಾವು ಆಗಸ್ಟ್ 25ರ ಬೆಳಿಗ್ಗೆ 8 ಗಂಟೆಗೆ ಠಾಣೆಗೆ ಭೇಟಿ ಕೊಟ್ಟು ರೋಲ್ ಕಾಲ್ ತೆಗೆದುಕೊಂಡ ನಂತರ ಕೈದಿಗಳ ಸೆಲ್ ಸೇರಿದಂತೆ ಇಡೀ ಠಾಣೆಯನ್ನು ಶೋಧಿ ಸಿದುದಾಗಿಯೂ, ಯಾರೂ ಇರಲಿಲ್ಲ ಎಂದು ತಿಳಿಸಿದ್ದಾರೆ. ಅನಂತರ ಮತ್ತೊಂದು ತನಿಖೆಗೆ ಸಂಬಂಧಿಸಿದಂತೆ ತಾವು ಹಳ್ಳಿಯೊಂದಕ್ಕೆ ಹೋದುದಾಗಿಯೂ, ಬೆಳಿಗ್ಗೆ 10 ಗಂಟೆಯ ವೇಳೆಗೆ ತಮ್ಮ ಠಾಣೆಯ ಇಬ್ಬರು ಪೋಲೀಸರು ಕಾರಿನಲ್ಲಿ ಅಲ್ಲಿಗೆ ಬಂದು ಠಾಣೆಯಲ್ಲಿ ಮೃತದೇಹವೊಂದು ಇರುವ ಬಗ್ಗೆ ತಿಳಿಸಿದರೆಂದೂ, ತಾವು ಅದೇ ಕಾರಿನಲ್ಲಿ ಹಿಂತುರುಗಿ ಬಂದಾಗ ಠಾಣೆಯಲ್ಲಿ ಶವವನ್ನು ಕಂಡದುದಾಗಿಯೂ ಅವರು ತಿಳಿಸಿದರು ಸ್ಥಳೀಯ ಆಸ್ಪತ್ರೆಯ ವೈದ್ಯರು ಸಾಕ್ಷ್ಯ ನೀಡಿ ನಂಜೆ 4 ಗಂಟೆಯ ಸಮಯದಲ್ಲಿ ಜಿಲ್ಲಾ ಪೋಲೀಸ್ ಅಧಿಕಾರಿಗಳು ತಮ್ಮನ್ನು ಪೋಲೀಸ್ ಠಾಣೆಗೆ ಕರೆಸಿದರೆಂದೂ, ಮೃತ ದೇಹಕ್ಕೆ ತಾವು ಯಾವ ರೀತಿಯ ವೈದ್ಯಕೀಯ ನೆರವನ್ನೂ ನೀಡಲಿಲ್ಲವೆಂದೂ ತಿಳಿಸಿದರು. ಈ ಮಧ್ಯೆ ಆಡಿಷನಲ್ ಜಿಲ್ಲಾ ನ್ಯಾಯಾಧೀಶರು ಶವಪರೀಕ್ಷೆ ನಡೆಸಿದಾಗ ಮೃತನ ಬಲಿ ಕಣ್ಣು ಬಾಟಲೂ ಸಿಕ್ಕಿದೆಯೆಂದೂ ಅದರಲ್ಲಿ ತೀವ್ರ ವಿಷ ಇತ್ತೆಂದೂ, ಅದನ್ನು ವಶಪಡಿಸಿ ಕೊಳ್ಳಲಾಗಿದೆಯೆಂದು ತಿಳಿಸಿದ್ದಾರೆ."

ನ್ಯಾಯಾಧೀಶರ ಮುಂದೆ ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ ಪ್ರಕಾರ ಬೆಳಿಗ್ಗೆ ರೋಲ್ ಕಾರ್ ಆದ ಮೇಲೆ ಕೈದಿಗಳ ಸೆಲ್ ಸೇರಿದಂತೆ ಪ್ರತಿಯೊಂದು ಕೋಣೆಯನ್ನೂ ನೋಡಿದ್ದೇನೆ, ಯಾರು ಇದ್ದಿರ ಲಿಲ್ಲ ಎಂದು ಹೇಳಿದ್ದಾರೆ. ಇಲ್ಲಿ ಸರ್ಕಾರ ಉತ್ತರ ಕೊಟ್ಟಂತ ಕಾಲದಲ್ಲಿ ಏಳೂವರೆ ಗಂಟೆಗೆ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಬರುತ್ತಾರೆ, 9 ಗಂಟೆಯವರೆಗೆ ಇರುತ್ತಾರೆ, ಈ ಸಂದರ್ಭದಲ್ಲಿ ಯಾರೂ ತಿಳಿಸಲಿಲ್ಲ ಎಂದು ಹೇಳಿದ್ದಾರೆ. ಆ ಸಬ್ ಇನ್ಸ್‌ಪೆಕ್ಟರ್ ಹೆಸರು ಶ್ರೀನಿವಾಸಂಪ್, ಅದಾದಮೇಲೆ ಯಾವುದೋ ಪಿಟಿಷನ್ ಎನ್‌ಕ್ವೈರಿಗೋಸ್ಕರ ಹೋಗುತ್ತಾರೆ. ಹೋದಮೇಲೆ ಹೆಡ್ ಕಾನ್ಸ್‌ಟೇಬರ್ ಮತ್ತು ಕಾನ್ಸ್‌ಟೇಬರ್ ಇದ್ದಂಥ ಸಂದರ್ಭದಲ್ಲಿ 10 ಗಂಟೆ ಸಮಯದಲ್ಲಿ ದಡಾರ್ ಶಬ್ದ ಬಂತು, ಹೋಗಿ ನೋಡಿದೆವು, ಒಬ್ಬ ಪಿಟ್ಸ್ ಬಂದು ನಡುಗುತ್ತಾ ಇದ್ದ, ಹ್ಯಾಂಡ್ ಕಪ್ಸ್ ಹಿಡಿದುಕೊಳ್ಳುವುದಕ್ಕೆ ಕೊಟ್ಟಿದ್ದೆವು ಎಂದು ಹೇಳಿದ್ದಾರೆ. ಇದು ಒಂದೊಂದಕ್ಕೆ ತದ್ವಿರುದ್ಧ ವಾಗಿ ಹೇಳಿಕೆ ಮತ್ತೊಂದು ವಿಷಯ, ಎಂದರೆ ಡಾಕ್ಟರ್ ಎವಿಡೆನ್ಸ್ ಕೊಟ್ಟಿದ್ದಾರೆ. ಎಸ್. ಪಿ.

ನಾಲ್ಕು ಗಂಟೆಗೆ ಹೇಳಿಕಳುಹಿಸಿದರು, ಔಷಧಿ ಕೊಡಲಿಲ್ಲ, ನಾಲ್ಕು ಗಂಟೆಗೆ ಟ್ರೀಟ್‌ಮೆಂಟ್ ಕೊಡಲಿಲ್ಲ ಎಂದು ಈ ಪತ್ರಿಕೆ ವರದಿ ಪ್ರಕಾರ ಹೇಳಿದ್ದಾರೆ. ಸರ್ಕಾರದ ವರದಿ ಪ್ರಕಾರ ಮತ್ತು ಅವರು ಮ್ಯಾಜಿಸ್ಟ್ರೇಟರ್ ಎನ್‌ಕ್ವೈರಿ ಆದಾಗ ಕೊಟ್ಟಿರುವ ಎವಿಡೆನ್ಸ್‌ಗೂ ವ್ಯತ್ಯಾಸ ಇದೆ. ಪ್ರಥಮವಾಗಿ ಕೊಟ್ಟ ಹೇಳಿಕೆಯ ಪ್ರಕಾರ ಸರ್ಕಾರದ ವರದಿ ಪ್ರಕಾರ ಅವನು ಬಿದ್ದ ತಕ್ಷಣ ಪೋಲೀಸ್ ಕಾನ್ಸ್‌ಟೇಬಲ್ ಡಾಕ್ಟರನ್ನು ಕರೆಯಲಿಕ್ಕೆ ಓಡಿ ಹೋದ ಆಗ ಡಾಕ್ಟರ್ ಪೇಷಂಟ್ ಕರೆದುಕೊಂಡು ಬನ್ನಿ, ಅಲ್ಲಿ ಬಂದು ಟ್ರೀಟ್‌ಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಪುನಃ ಹತ್ತು, ಹತ್ತು ಕಾಲು ಗಂಟೆಗೆ ಬರುವ ಹೊತ್ತಿಗೆ ನತ್ತು ಹೋದ ಎಂದು ಇದೆ. ಇದು ಮತ್ತಷ್ಟು ಸಂಶಯಕ್ಕೆ ಎಡೆಕೊಡುವುದಕ್ಕೆ ಸಾಧ್ಯವಾಗುತ್ತದೆ. ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡುವುದಕ್ಕೆ ಸಾಕಷ್ಟು ಸಕಾರಣಗಳು ಇವೆ. ಜುಡಿಷಿಯರಿ ಪ್ರೊಬ್ ಮಾಡಿರಿ ಎಂದು ಹೇಳಿದರೆ ಸರ್ಕಾರಕ್ಕೆ ಕೋಪ ಬರಬಹುದು. So, impartial enquiry must be conducted by a reputed officer. Senior most reputed Officer has to be duputed and see that an enquiry is conducted and a report made to this House.

ಶ್ರೀ ಡಿ. ದೇವರಾಜ ಅರಸ್.— ಸರ್ಕಾರದ ಪರವಾಗಿ ಈಗಾಗಲೇ ಹೇಳಿಕೆಯನ್ನು ಮಾನು ಮಂತ್ರಿಗಳು ಕೊಟ್ಟು ಒಬ್ಬ ಆಫೀಸರಿಯನ್ನು ಡೆಪ್ಯೂಟ್ ಮಾಡಿ ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳಿದ್ದು ಜ್ಞಾಪಕವಿದೆ. ಶ್ರೀಮಾನ್ ದೇವೇಗೌಡರು ಹೇಳುವುದರ ಉದ್ದೇಶವಾದರೂ ಸಹ ಯಾರಾದರೂ ಇಂಪಾರ್ಷಿಯಲ್ ಆಗಿ ವಿಚಾರಣೆ ನಡೆಸಬೇಕು ಎನ್ನುವುದೇ ಆಗಿದೆ. ಅದಕ್ಕೆ ನನ್ನದು ಅಭ್ಯಂತರವಿಲ್ಲ. ದಕ್ಷರು ಮತ್ತು ಯಾವ ಒಂದು ದೃಷ್ಟಿಕೋನವನ್ನೂ ಮುಚ್ಚುವುದಕ್ಕೆ ಪ್ರಯತ್ನ ಮಾಡದೆ ಇರುವಂಥವರನ್ನು ನೇಮಕ ಮಾಡಿ ವರದಿಯನ್ನು ತರಿಸುತ್ತೇನೆ. ಆದರೆಲ್ಲೇನೂ ಭಿನ್ನಾಭಿಪ್ರಾಯವಿಲ್ಲ. ಸರ್ಕಾರಕ್ಕೆ ಯಾವುದನ್ನೂ ಮುಚ್ಚಬೇಕೆಂಬ ಉದ್ದೇಶವಿಲ್ಲ. ಯಾರು ತಪ್ಪಿತಸ್ಥರಿದ್ದಾರೆ, ಪೋಲೀಸರೇ ತಪ್ಪು ಮಾಡಿದ್ದರೂ ಶಿಕ್ಷೆ ಮಾಡಬೇಕಾಗುತ್ತದೆ. ಹಿಂದೆ ಅನೇಕ ಸಲ ಬೇರೆ ಬೇರೆ ಕೇಸ್‌ಗಳಲ್ಲಿ ಎನ್‌ಕ್ವೈರಿ ನಡೆದು ತಪ್ಪಿತಸ್ಥರಿಗೆ ಶಿಕ್ಷೆ ಮಾಡಿದ್ದೇವೆ.

Enquiry report on Misappropriation of Cement and Iron supplied for Construction of Harijana Hostels

ಶ್ರೀ ಸಾಗೋಡು ತಿಮ್ಮಪ್ಪ (ಸಾಗರ).—ನಾನು ಕಳೆದ ಶನಿವಾರ ತಮಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ. ಬೆಂಗಳೂರಿನಲ್ಲರುವ ಸಾರ್ವಜನಿಕ ವಿದ್ಯಾರ್ಥಿನಿಲಯಗಳಿಗೆ ಸಂಬಂಧಪಟ್ಟ ಸಿಮೆಂಟ್ ಮತ್ತು ಕಬ್ಬಿಣದ ವಿಚಾರದಲ್ಲಿ ಸರ್ಕಾರ ವಿಷಯವನ್ನು ಜಾಗೃತ ಆಯೋಗದವರಿಗೆ ವಹಿಸಿದ ಮೇಲೆ ಅವರು ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆಂದು ಗೊತ್ತಾಗಿದೆ ಆದರೆ ಸದನಕ್ಕೆ ಈ ಹೊತ್ತಿನವರೆಗೂ ಆ ವರದಿಯ ಪ್ರಕಾರ ಯಾರು ಇದರಲ್ಲಿ ತಪ್ಪಿತಸ್ಥರು ಎನ್ನುವುದು ಗೊತ್ತಾಗಿಲ್ಲ. ಆ ದೃಷ್ಟಿಯಿಂದ ಸರ್ಕಾರದವರು ಜಾಗೃತ ಆಯೋಗದವರ ವರದಿಯನ್ನು ಸಭೆಗೆ ಒದಗಿಸಿಕೊಡಬೇಕು. ಜೊತೆಗೆ ಯಾರು ತಪ್ಪಿತಸ್ಥರು ಎಂದು ವಿಚಾರಣೆ ಕಾಲದಲ್ಲಿ ತಿಳಿದು ಬಂದಿದೆ ಅವರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಎನ್ನುವುದೂ ಬೇಕಾಗಿದೆ. ಸರ್ಕಾರದವರು ಜಾಗೃತ ಆಯೋಗದವರ ವರದಿಯನ್ನು ಕೊಡುವುದಲ್ಲದೆ ತಪ್ಪಿತಸ್ಥರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದಾರೆನ್ನುವುದನ್ನೂ ಈ ಸಭೆಗೆ ತಿಳಿಸಬೇಕಾಗಿ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ತಿಮ್ಮಪ್ಪನವರು ಎತ್ತಿರುವ ವಿಷಯ ಬೆಂಗಳೂರು ಡಿವಿಜನ್ನಿಗೆ ಸಂಬಂಧಪಟ್ಟುದ್ದು. ಎರಡು ಹಾಸ್ಟಲ್‌ಗಳ ಕಟ್ಟಡಗಳಿಗೂ ಸೇರಿದಂತೆ ಸಿಮೆಂಟ್, ಸ್ಟೀಲ್ ಇವುಗಳ ದುರುಪಯೋಗದ ಬಗ್ಗೆ ತನಿಖೆ ಮಾಡಲು ಜಾಗೃತ ಆಯೋಗಕ್ಕೆ ವಹಿಸಿದ್ದ ಬಗ್ಗೆ ಏನಾಗಿದೆ ಎನ್ನುವ ವಿವರಗಳನ್ನು ಕೊಡಬೇಕು. ಷಾರ್ಜೇಜ್ ಆಗಿದ್ದುದರ ಬಗ್ಗೆ ಯಾರ ಯಾರ ಮೇಲೆ ಏನೇನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವ ವಿಚಾರದಲ್ಲಿ ಷಾರ್ಟ್ ನೋಟೀಸ್ ಕ್ವೆಶ್ಚನ್ ಕಳುಹಿಸಿದ್ದೇನೆ, ಪರ್ಸನಲ್ ಆಗಿ ಮುಖ್ಯ ಮಂತ್ರಿಗಳಿಗೆ ಬರೆದಿದ್ದೇನೆ. ಈ ಹೊತ್ತಿನವರೆಗೂ ಉತ್ತರ ಬಂದಿಲ್ಲ. ಅದೇ ವಿಷಯವನ್ನೇ ಮಾನ್ಯ ತಿಮ್ಮಪ್ಪನವರೂ ಈಗ ಎತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಜಾಗೃತ ಆಯೋಗದ ವರದಿ ಬಂದಿದೆ, ಅದರಂತೆ ಪ್ರೊಸೀಡಿಂಗ್ಸ್ ನಡೆದಿದೆ ಎಂದು ಜ್ಞಾಪಕ. ಅದನ್ನು ನೋಡಿಸಿ ಬೇಕಾದರೆ ನಾಳೆ ತಮ್ಮ ಮುಂದೆ ಇಡುತ್ತೇನೆ.